ಕರ್ನಾಟಕ ಲೋಕಾಯುಕ್ತ

DRE-2

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\451\2014\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:08/06/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ ಹನುಮಂತರಾಯಪ್ಪ ಜಿ, ಶ್ರೀ ರಾಘವೇಂದ್ರ ನಿಲಂಯ, 2ನೇ ಕ್ರಾಸ್, 1ನೇ ಮುಖ್ಯ ರಸ್ತೆ, ವಿಶ್ವಣ್ಣ ಬಡಾವಣೆ, ಶಾಂತಿನಗರ, ತುಮಕೂರು ಟೌನ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆಯ, ತುಮಕೂರು ಟೌನ್, ಶಾಂತಿನಗರ, ವಿಶ್ವಣ್ಣ ಬಡಾವಣೆಯ ಶ್ರೀ ಹನುಮಂತರಾಯಪ್ಪ ಜಿ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ ರಮೇಶ್ ಕೆ, ತಹಶೀಲ್ದಾರ್, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದೆ.

2) **ದೂರಿನ ಸಂಕ್ಷಿಪ್ತ ವಿವರಣೆ:** ದೂರುದಾರರು ಶ್ರೀಮತಿ ಬಳೆ ರಂಗಮ್ಮ ಕೋಂ ಲೇಟ್ ವೆಂಕಟಶ್ಯಾಮಯ್ಯರವರ ಜಿ.ಪಿ.ಎ. ಹೋಲ್ಡರ್ ಆಗಿರುತ್ತಾರೆ. ಸದರಿ ಬಳೆ ರಂಗಮ್ಮ ರವರಿಗೆ ಮಧುಗಿರಿ ತಾಲ್ಲೂಕಿನ ಸೋದೇನಹಳ್ಳಿ ಗ್ರಾಮದ ಸರ್ಕಾರಿ ಗೋಮಾಳ ಸ. ನಂ.18ರಲ್ಲಿ 2 ಎಕರೆ 20 ಗುಂಟೆ ಜಮೀನು ಅಕ್ರಮ ಸಕ್ರಮ ಕಮಿಟಿಯಲ್ಲಿ ಮಂಜೂರಾಗಿ ಮಧುಗಿರಿ ತಹಸೀಲ್ದಾರ್ ರವರ 18.10.1982ರ ಅಧಿಕೃತ ಜ್ಞಾಪನಾ ಪತ್ರದಂತೆ ಸದರಿ ಬಳೆ ರಂಗಮ್ಮ ರವರಿಗೆ ಸಾಗುವಳಿ ಚೀಟಿ ನೀಡಿದ್ದು, ಅವರ ಹೆಸರಿಗೆ ಎಂ.ಆರ್.25/83-84ರಂತೆ ಖಾತೆ ಬದಲಾವಣೆ ಆಗಿರುತ್ತದೆ. ಸದರಿ ಜಮೀನು ಮಂಜೂರಾಗಿ 31 ವರ್ಷ ಕಳೆದರೂ ಸಹ ಎದುರುದಾರರು ಅವರ ಹೆಸರಿಗೆ ಜಮೀನು ದುರಸ್ಥಿ ಮಾಡಿರುವುದಿಲ್ಲ. ಆದ್ದರಿಂದ, ಸದರಿ ಜಮೀನು ದುರಸ್ಥಿ ಪಡಿಸಿ ಅದರ ಮಾರಾಟಕ್ಕೆ ಅನುಮತಿ ಪತ್ರ ಕೊಡಿಸಿಕೊಡಬೇಕೆಂದು ಸದರಿ ಬಳೆ ರಂಗಮ್ಮನವರು 24.12.12ರಂದು ಎದುರುದಾರರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿ ಸಲ್ಲಿಸಿ 1 ವರ್ಷ 2

BD-451/2014/DRE-2

ಎದುರುದಾರರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿ ಸಲ್ಲಿಸಿ 1 ವರ್ಷ 2 ತಿಂಗಳೂ ಕಳೆದರು ಎದುರುದಾರರು ಕ್ರಮ ಕೈಗೊಳ್ಳದ ಕಾರಣ ಸದರಿಯವರ ವಿರುದ್ಧ ಲೋಕಾಯುಕ್ತಕ್ಕೆ ದೂರು ಅರ್ಜಿ ಸಲ್ಲಿಸಿದ ಮೇಲೆ ಮಾನ್ಯ ಉಪಲೋಕಾಯುಕ್ತರವರು ಸದರಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ 1 ತಿಂಗಳಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ವರದಿಯನ್ನು ಸಲ್ಲಿಸುವಂತೆ ಆದೇಶಿಸಿರುತ್ತಾರೆ. ಸದರಿ ಆದೇಶದ ಪ್ರತಿಯನ್ನು ಎದುರುದಾರರಿಗೆ ಸಲ್ಲಿಸಿದ್ದರೂ ಸಹ ಎದುರುದಾರರು ಯಾವುದೇ ಆದೇಶಕ್ಕೆ ಬೆಲೆಕೊಡದೆ ಸದರಿ ಜಮೀನನ್ನು ದುರಸ್ಥಿ ಮಾಡಿರುವುದಿಲ್ಲ ಮತ್ತು ಜಮೀನು ಮಾರಾಟಕ್ಕೆ ಅನುಮತಿ ಕೊಟ್ಟಿರುವುದಿಲ್ಲ. ಕಾರಣ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

3) ಸದರಿ ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ:-

> ಸದರಿ ಜಮೀನಿನ ಪಹಣಿಯು ದೋಷಪೂರಿತವಾಗಿದ್ದರಿಂದ ಅರ್ಜಿದಾರರಿಗೆ ಸಂಬಂಧಿಸಿದ ಪಹಣಿಯನ್ನು ಸರಿಪಡಿಸುವಂತೆ ಉಪ ವಿಭಾಗಾಧಿಕಾರಿಗಳಿಂದ ಸಂಖ್ಯೆ:ಆರ್.ಆರ್.ಟಿ.(ಎನ್) ಸಿಆರ್.34/2014-15ರಲ್ಲಿ 20.8.14ರಂದು ಆದೇಶ ಪಡೆದು ಪಹಣಿ ಸರಿಪಡಿಸಿದ ಕ್ರಮ ವಹಿಸಿರುತ್ತದೆ. ಪಹಣಿ ಸರಿಪಡಿಸುವ ವಿಚಾರದಲ್ಲಿ ತಾಂತ್ರಿಕ ತೊಂದರೆ ಇದ್ದುದರಿಂದ ಪಹಣಿ ಸರಿಯಾಗಲು ದೀರ್ಘಾವಧಿ ಸಮಯ ತೆಗೆದುಕೊಂಡಿರುತ್ತದೆ. ಈಗ ಪಹಣಿ ಸರಿ ಇದ್ದು ಸರಿ ಇರುವ ಪಹಣಿಯನ್ನು ಮತ್ತು ದುರಸ್ಥಿ ನಮೂನೆ 1 ರಿಂದ 5ರ ನಮೂನೆಗಳನ್ನು ಭರ್ತಿ ಮಾಡಿ ಮಧುಗಿರಿ ವಿಭಾಗದ ಉಪವಿಭಾಗಾಧಿಕಾರಿಗಳು, ಮಧುಗಿರಿ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರು ದೃಢೀಕರಿಸಿದ ನಂತರ ದುರಸ್ಥಿ ಕ್ರಮ ವಹಿಸಬೇಕಾಗಿರುತ್ತದೆ. ಆದ್ದರಿಂದ, ಈ ಎಲ್ಲಾ ಹಂತದ ಕಾಲಕ್ಕೆ 3 ತಿಂಗಳ ಕಾಲಾವಕಾಶವನ್ನು ಕೋರಿದ್ದು, ಆನಂತರ, ಸದರಿ ಪ್ರಕರಣದಲ್ಲಿ ಕೆಲವು ತಾಂತ್ರಿಕ ಸಮಸ್ಯೆಯಿಂದ ಮತ್ತು ಮೂಲ ಮಂಜೂರಾತಿ ಕಡತ ಸಕಾಲದಲ್ಲಿ ದೊರೆಯದ ಹಿನ್ನೆಲೆಯಲ್ಲಿ ದುರಸ್ಥಿ ಕಾರ್ಯ ವಿಳಂಭವಾಗಿರುತ್ತದೆ ಎಂದು ಹೇಳಿದ್ದಾರೆ.

4) ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರ ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ:-

Sd/-

BD-4 51/2014/DRE-2

4) ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರ ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ:-

ಎದುರುದಾರರಿಗೆ ಮತ್ತು ಸಂಬಂದಪಟ್ಟ ಸಿಬ್ಬಂದಿಯವರಿಗೆ ತಾನು ಹಣ ಕೊಡಲಿಲ್ಲವೆಂಬ ಕಾರಣದಿಂದ ಸಕಾಲ ಯೋಜನೆಯಡಿಯಲ್ಲಿಯ ಸರ್ಕಾರದ ಆದೇಶ ಮತ್ತು ಸಉತ್ತೋಲೆಗಳನ್ನು ಎದುರುದಾರರು ಪಾಲಿಸದೆ ಉದ್ದೇಶ ಪೂರ್ವಕವಾಗಿ 31.12.12 ರಿಂದ ಇಲ್ಲಿಯವರೆಗೆ ಎದುರುದಾರರು ವಿಳಂಭ ಮಾಡಿರುತ್ತಾರೆ. ಆದ್ದರಿಂದ, ಪುನಃ ವಿಳಂಬಕ್ಕೆ ಅವಕಾಶ ನೀಡದೆ ಸದರಿ ಜಮೀನಿನ ದುರಸ್ಥಿ ಪತ್ರ ಮತ್ತು ಜಮೀನುಮಾರಾಟಕ್ಕೆ ಅನುಮತಿ ಪತ್ರಗಳನ್ನು ಎದುರುದಾರರಿಂದ ಕೊಡಿಸಕೊಡಬೇಕೆಂದು ಮತ್ತು ಎದುರುದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಕೋರಿದ್ದಾರೆ.

5) ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:-

ದೂರುದಾರರು ಶ್ರೀಮತಿ ಬಳೆ ರಂಗಮ್ಮ ಕೋಂ ಲೇಟ್ ವೆಂಕಟಶ್ಯಾಮಯ್ಯರವರ ಜಿ.ಪಿ.ಎ. ಹೋಲ್ಡರ್ ಆಗಿದ್ದು, ಸದರಿ ಬಳೆ ರಂಗಮ್ಮ ರವರಿಗೆ ಮಧುಗಿರಿ ತಾಲ್ಲೂಕಿನ ಸೋದೇನಹಳ್ಳಿ ಗ್ರಾಮದ ಸರ್ಕಾರಿ ಗೋಮಾಳ ಸ. ನಂ.18ರಲ್ಲಿ 2 ಎಕರೆ 20 ಗುಂಟೆ ಜಮೀನು ಅಕ್ರಮ ಸಕ್ರಮ ಕಮಿಟಿಯಲ್ಲಿ ಮಂಜೂರಾಗಿ ಮಧುಗಿರಿ ತಹಸೀಲ್ದಾರ್ ರವರ 18.10.1982ರ ಅಧಿಕೃತ ಜ್ಞಾಪನಾ ಪತ್ರದಂತೆ ಸದರಿ ಬಳೆ ರಂಗಮ್ಮ ರವರಿಗೆ ಸಾಗುವಳಿ ಚೀಟಿ ನೀಡಿದ್ದು, ಅವರ ಹೆಸರಿಗೆ ಎಂ.ಆರ್.25/83-84ರಂತೆ ಖಾತೆ ಬದಲಾವಣೆ ಆಗಿರುತ್ತದೆ. ಸದರಿ ಜಮೀನು ಮಂಜೂರಾಗಿ 31 ವರ್ಷ ಕಳೆದರೂ ಸಹ ಎದುರುದಾರರು ಅವರ ಹೆಸರಿಗೆ ಜಮೀನು ದುರಸ್ಥಿ ಮಾಡಿರುವುದಿಲ್ಲ. ಆದ್ದರಿಂದ, ಸದರಿ ಜಮೀನು ದುರಸ್ಥಿ ಪಡಿಸಿ ಅದರ ಮಾರಾಟಕ್ಕೆ ಅನುಮತಿ ಪತ್ರ ಕೊಡಿಸಿಕೊಡಬೇಕೆಂದು ಸದರಿ ಬಳೆ ರಂಗಮ್ಮನವರು 24.12.12ರಂದು ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದು, ಅರ್ಜಿ ಸಲ್ಲಿಸಿ 1 ವರ್ಷ 2 ತಿಂಗಳೂ ಕಳೆದರು ಎದುರುದಾರರು ಕ್ರಮ ಕೈಗೊಳ್ಳದ ಕಾರಣ ಸದರಿಯವರ ವಿರುದ್ಧ ಲೋಕಾಯುಕ್ತಕ್ಕೆ ಈ ಹಿಂದೆ ದೂರು ಅರ್ಜಿ ಸಲ್ಲಿಸಿದ್ದು, ಸದರಿ

Sd/-

BD-4-51/2014/DRE-2

ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ 1 ತಿಂಗಳಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ವರದಿಯನ್ನು ಸಲ್ಲಿಸುವಂತೆ ಆದೇಶಿಸಲಾಗಿದ್ದು, ಎದುರುದಾರರು ಯಾವುದೇ ಕ್ರಮ ಕೈಗೊಂಡಿಲ್ಲ.

6) ನಂತರ ದೂರುದಾರರು ಸದರಿ ದೂರನ್ನು ಎದುರುದಾರರ ವಿರುದ್ಧ ಸಲ್ಲಿಸಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ದೂರಿನಲ್ಲಿನ ಅಂಶವನ್ನು 3 ತಿಂಗಳೊಳಗಾಗಿ ಇತ್ಯರ್ಥಪಡಿಸುವುದಾಗಿ ಒಪ್ಪಿರುತ್ತಾರೆ. ಆದರೆ, ಈವರೆವಿಗೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೇ ಸದರಿ ಜಮೀನಿಗೆ ಸಂಬಂಧಪಟ್ಟ ಮೂಲ ಮಂಜೂರಾತಿ ಕಡತ ಲಭ್ಯವಿಲ್ಲದೇ ಇರುವುದರಿಂದ ಹಾಗೂ ಕೆಲವು ತಾಂತ್ರಿಕ ಕಾರಣಗಳಿಂದ ದುರಸ್ಥಿ ಕಾರ್ಯನಿರ್ವಹಿಸುರುವುದಿಲ್ಲವೆಂದು ತಿಳಿಸಿರುತ್ತಾರೆ. ಯಾವ ತಾಂತ್ರಿಕ ಕಾರಣದಿಂದ ದುರಸ್ಥಿ ಮಾಡಿಲ್ಲ ಎಂಬ ಬಗ್ಗೆ ಸ್ಪಷ್ಟವಾದ ಕಾರಣವನ್ನು ತಿಳಿಸಿಲ್ಲ. ಹಾಗೂ ನಮೂನೆ 1 ರಿಂದ 5ನ್ನು ಭೂ ದಾಖಲೆಗಳ ಉಪನಿರ್ದೇಶಕರು ಹಾಗೂ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು, ತುಮಕೂರು ರವರು ಅನುಮೋದನೆ ನೀಡಬೇಕಾಗಿರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ. ಆದರೆ, ಸದರಿಯವರಿಗೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ದೂರುದಾರರ ಜಮೀನಿಗೆ ಸಂಬಂಧಪಟ್ಟ ಮೂಲ ಮಂಜೂರಾತಿ ಕಡತವನ್ನು ನಿರ್ವಹಣೆ ಮಾಡುವ ಜವಾಬ್ದಾರಿ ಎದುರುದಾರರಿಗೆ ಇರುತ್ತದೆ. ಆದರೆ, ಎದುರುದಾರರು ಸದರಿ ಜಮೀನಿಗೆ ಸಂಬಂಧಪಟ್ಟ ಮೂಲ ಕಡತ ಸಕಾಲದಲ್ಲಿ ದೊರೆಯದ ಕಾರಣ ಮತ್ತು ಕೆಲವು ತಾಂತ್ರಿಕ ಕಾರಣಗಳಿಂದ ಎಂಬುದಾಗಿ ಹಾರಿಕೆಯ ಉತ್ತರ ನೀಡಿದ್ದಾರೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ, ದುರಸ್ಥಿ ಕಾರ್ಯ ಮಾಡಿ, ಅವಶ್ಯಕತೆ ಇದ್ದಲ್ಲಿ, ಮಾರಾಟ ಅನುಮತಿ ಪತ್ರ ನೀಡುವ ಜವಾಬ್ದಾರಿ ಎದುರುದಾರರಿಗೆ ಇರುತ್ತದೆ. ಆದರೆ, ಎದುರುದಾರರು ದೂರುದಾರರ ದೂರಿಗೆ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

7) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

BD-451/2014/DRE-2

8) ಆದ್ದರಿಂದ, ದೂರುದಾರರಿಗೆ ಮಂಜೂರಾದ ಸರ್ವೆ ನಂ.18ರ 2 ಎಕರೆ 20 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದುರಸ್ಥಿ ಕಾರ್ಯ ಮಾಡಿ ಕಾನೂನು ರೀತಿ ಮಾರಾಟ ಅನುಮತಿ ನೀಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9) ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 12/6/17.

(ನ್ಯಾಯಮೂರ್ತಿ ಸುಭಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.